# ಹಂಸಗೀತೆ-50

## ದೃಶ್ಯ ಮಾಧುರ್ಯದ 'ಮೌನ'ಕಾವ್ಯ
## ಕನ್ನಡ ಚಿತ್ರರಂಗದ ಅಯ್ಯರ್‌ಗಳು



**ಮುರಳೀಧರ ಖಜಾನೆ**

ಜಿ.ವಿ. ಅಯ್ಯರ್ ಅವರ 'ಹಂಸಗೀತೆ'ಯನ್ನು ಮೀರಿದ ಮತ್ತೊಂದು 'ಹಂಸಗೀತೆ'ಯ ಸಾಧ್ಯತೆಯನ್ನು ಹುಡುಕುವ ಪ್ರಯತ್ನ.

ಜಿ.ವಿ. ಅಯ್ಯರ್ ಅವರ ಮೈಲಿಗಲ್ಲಿನಂಥ ಚಿತ್ರ 'ಹಂಸಗೀತೆ' ಬಿಡುಗಡೆಯಾಗಿ ಈ ವರ್ಷಕ್ಕೆ ಐವತ್ತು ತುಂಬುತ್ತದೆ. ಈ ಚಿತ್ರದ ಬಗ್ಗೆ ಬಂದಿರುವ ವಿಮರ್ಶೆಗಳು ತೀರಾ ಕಡಿಮೆ. ಆ ಕಾಲಕ್ಕೆ ಬಂದಿರುವ ಬಗ್ಗೆ ಅಷ್ಟಾಗಿ ನೆನಪಿಲ್ಲ. ಹಾಗಾಗಿ ಈಗ ಮತ್ತೆ ಮತ್ತೊಮ್ಮೆ 'ಹಂಸಗೀತೆ'ಯನ್ನು ನೋಡುವ ಒಂದು ಪ್ರಯತ್ನ.

ಎಪ್ಪತ್ತೈದರ ದಶಕ, ಕನ್ನಡ ಸಾಂಸ್ಕೃತಿಕ ಲೋಕದ ಸುವರ್ಣಯುಗ ಎಂಬುದು ಒಂದು ನಂಬಿಕೆ. ಹಾಗೆಂದು ಅದರ ಹಿಂದಿನ ದಶಕಗಳು ಕನ್ನಡದ ಸಾಂಸ್ಕೃತಿಕ ಲೋಕದ ವಿಸ್ತಾರದ ದೃಷ್ಟಿಯಿಂದ ಬರಡು ಎಂದು ಹೇಳಲಾಗುವುದಿಲ್ಲ. ಎಪ್ಪತ್ತೈದರ ದಶಕದಲ್ಲಿ ಸಾಹಿತ್ಯ, ರಂಗಭೂಮಿ, ಸಂಗೀತ, ಕಲೆ, ಸಿನಿಮಾ ರಂಗಗಳು ಕಂಡ ಹೊಸ ತಿರುವಿಗೆ ಅದರ ಹಿಂದಿನ ಕಾಲದಲ್ಲಿ ತಳಹದಿಯೊಂದು ಸೃಷ್ಟಿಯಾಯಿತು ಎನ್ನುವುದು ಹೆಚ್ಚು ಸರಿಯಾದೀತು. ಉಳಿದ ಕ್ಷೇತ್ರಗಳನ್ನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಇಲ್ಲಿ ಪ್ರಸ್ತಾಪಿಸುತ್ತಿರುವುದು ಎಪ್ಪತ್ತೈದನೇ ಇಸವಿಯಲ್ಲಿ ಬಿಡುಗಡೆಯಾದ ಕನ್ನಡ ಚಿತ್ರಗಳ ಬಗ್ಗೆ. 1975ರಲ್ಲಿ ಒಟ್ಟು 32 ಚಿತ್ರಗಳು ಬಿಡುಗಡೆಯಾದವು. ಆ ಪೈಕಿ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸು ಪಡೆದ ಚಿತ್ರಗಳೆಂದರೆ ರಾಜ್‌ಕುಮಾರ್ ಅವರ ಐತಿಹಾಸಿಕ 'ಮಯೂರ', 'ದಾರಿ ತಪ್ಪಿದ ಮಗ' ಮತ್ತು ಪುಟ್ಟಣ್ಣ ಕಣಗಾಲ್ ಅವರ 'ಶುಭಮಂಗಳ'. ಆದರೆ ಇದೇ ರೀತಿ ನಾಲ್ಕು ಚಿತ್ರಗಳು ರಾಷ್ಟ್ರಪ್ರಶಸ್ತಿ ಗಳಿಸಿಕೊಂಡವು. ಬಿ.ವಿ. ಕಾರಂತರ 'ಚೋಮನ ದುಡಿ', ಪಿ. ಲಂಕೇಶ್ ಅವರ 'ಪಲ್ಲವಿ', ಜಿ.ವಿ. ಅಯ್ಯರ್ ಅವರ 'ಹಂಸಗೀತೆ' ಹಾಗೂ ಎಂ.ಬಿ.ಎಸ್. ಪ್ರಸಾದ್ ಅವರ 'ಕಂಕಣ'. ವಿಷಾದದ ಸಂಗತಿಯೆಂದರೆ 'ಚೋಮನ ದುಡಿ'ಗೆ ಸಿಕ್ಕ ಮಾನ್ಯತೆ, ವಿಮರ್ಶೆ, ಉಳಿದ ಚಿತ್ರಗಳಿಗೆ ದಕ್ಕಲಿಲ್ಲ.

### ಬರಿಗಾಲ ನಿರ್ದೇಶಕ ಅಯ್ಯರ್

'ಹಂಸಗೀತೆ' ತಳುಕಿನ ರಾಮಸ್ವಾಮಯ್ಯ